O.S. No- 64/2017

Pw-2

<u>ದಿನಾಂಕಃ 23-01-2026-ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟಿ ಸವಾಲುಃ ಶ್ರೀ ಎ ಪಿ ಕೆ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮನೆ ಹಾಗೂ ವಾದಿಯ ಮನೆ ಅಲ್ಲೆ ಅಕ್ಕ ಪಕ್ಕದಲ್ಲಿವೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ವಾರ್ಡ ನಂಬರ ಹೇಳಲು ಬರುವುದಿಲ್ಲ. ನಾನು ಓದಿಲ್ಲ ಆದ್ದರಿಂದ ನನ್ನ ಮನೆಯ ನಂಬರ ಹೇಳಲು ಬರುವುದಿಲ್ಲ. ನಾನು ಗೋಠೆ ಗ್ರಾಮದ ರಹವಾಸಿಯಾಗಿದ್ದೇನೆ ಎಂದು ತೋರಿಸಲು ಆಧಾರ ಕಾರ್ಡನ್ನು ಹಾಜರು ಪಡಿಸಿಲ್ಲ.

ಪ್ರತಿವಾದಿಯ ಪರಿಚಯ ಇದೆ. ಗೋಠೆ ಗ್ರಾಮದಲ್ಲಿ ಪ್ರತಿವಾದಿ ಹನಮಂತ ಇವರ ಮನೆ ಎಲ್ಲಿದೆ ಎಂದು ಗೊತ್ತು. ಅವರ ವಾರ್ಡ ನಂಬರ ಹೇಳಲು ಬರುವುದಿಲ್ಲ. ಆ ಮನೆ ಎಷ್ಟು ಅಂಕಣ ಮನೆ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಸಂಚಗಾರ ಹಣ ಎಂದು ರೂ. 2,60,000/- ಹಣವನ್ನು ಪ್ರತಿವಾದಿಗೆ ನೀಡಿರುತ್ತಾರೆ. ಆಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ತಾರಿಕು ಸಹ ನೆನಪಿಲ್ಲ. ಪ್ರತಿವಾದಿ ಮಕ್ಕಳು ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಅವರು ಕರೆದರು ಬರಲಿಲ್ಲ. ಸಂಚಗಾರ ಹಣ ಕೊಡುವ ಸಮಯದಲ್ಲಿ ಪ್ರತಿವಾದಿಯ ಹೆಂಡತಿ ಹಾಗೂ ಮಕ್ಕಳು ಹಾಜಡಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಈ ರೀತಿ ಸಣ್ಣ ಪುಟ್ಟ ವ್ಯವಹಾರ ಮಾಡುತ್ತೇನೆ. ಸಾಮಾನ್ಯವಾಗಿ ಒಂದು ಜಮೀನಗಳನ್ನು ಮಾರಾಟ ಕಾಲದಲ್ಲಿ ಅವರ ಹೆಂಡತಿ ಮಕ್ಕಳ ಸಹಿಯನ್ನು ಪಡೆದುಕೊಳ್ಳಬೇಕು ಎಂದರೆ ಸರಿ. ಪ್ರತಿವಾದಿ ಹನಮಂತ ಈ ದಾವೆ ಚಾಲ್ತಿಯಲ್ಲಿರುವಾಗಲೇ ಮರಣ ಹೊಂದಿದ್ದಾನೆ ಎಂದರೆ ಸರಿ. ಮೃತ ಹನಮಂತನಿಗೆ ಹೆಂಡತಿ ಹಾಗೂ ಇಬ್ಬರು ಮಕ್ಕಳು ಎಂದರೆ ಸರಿ. ಹನಮಂತನ ಹೆಂಡತಿ ಹೆಸರು ಕಸ್ತೂರಿ. ಅವರೇ ಈಗ ದಾವಾ ಆಸ್ತಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಕಸ್ತೂರಿಯನ್ನು ಈ ಎರಡು ವರ್ಷದಲ್ಲಿ ನೋಡಿದ್ದೇನೆ. ಈ ದಾವಾ ಆಸ್ತಿಯನ್ನು ಬಿಟ್ಟು ಅವರಿಗೆ ಬೇರೆ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ವಾದಿ ನನಗೆ ಸಾಕ್ಷಿ ಹೇಳಲು ಹೇಳಿದ್ದಳು ಎಂದರೆ ಸರಿ.

ವಾದಿಗೆ ತನ್ನ ಹೊಲದ ಮನೆಯಲ್ಲಿ ವಾಸವಾಗಿದ್ದಾಳೆ. ಈ ಪೂರ್ವದಲ್ಲಿ ವಾದಿ ಈ ದಾವೆಯ ಸಂಬಂಧ ಏನು ಹೇಳಿಲ್ಲ. ವಾದಿ ಪ್ರತಿವಾದಿ ಮೇಲೆ ದಾವೆ ಹಾಕಿದ ಮಾಹಿತಿ ಇದೆ. ಗೋಠೆ ಗ್ರಾಮದಲ್ಲಿ ನನ್ನದು ಸ್ವಲ್ಪ ಜಮೀನು ಇದೆ. ನಾನು ಉಪಜೀವನಕ್ಕಾಗಿ ಮಹಾರಾಷ್ಟ್ರಕ್ಕೆ ಹಾಗೂ ಗುಜರಾತಗೆ ದುಡಿಯುವುದಕ್ಕೆ ಕುಟುಂಬ ಸಮೇತ ಹೋಗುತ್ತೇವೆ ಎಂದರೆ ಸರಿ. ನನಗೆ ಹಣಕಾಸಿನ ಅಡಚಣೆ ಬಂದಾಗಲೆಲ್ಲಾ ವಾದಿ ನನಗೆ ಹಣದ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿ ನನಗೆ ಆರ್ಥಿಕ ಸಹಾಯ ಮಾಡಿದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹನಮಂತ ದಿನ ನಿತ್ಯ ಮದ್ಯಪಾನ ಮಾಡುತ್ತಿದ್ದ ಎಂದರೆ ಸರಿಯಲ್ಲ. ಹನಮಂತನು ತನ್ನ ಕುಟುಂಬದ ಕಡೆಗೆ ಲಕ್ಷ್ಯ ಕೊಡುತ್ತಿದ್ದನು. ಈ ಮನೆಯನ್ನು ಮಾರಾಟ ಮಾಡಲು ಪ್ರತಿವಾದಿಗೆ ತನಗೆ ಏನು ಅಡಚಣೆ ಇತ್ತು ಎಂದು ನನಗೆ ಹೇಳಿಲ್ಲ. ನಾನು ವಾದಿಯ ಪರವಾಗಿ ಹಿರಿತನ ವಹಿಸಿದ್ದೆ ಎಂದರೆ ಸರಿ. ನಾನು, ವಾದಿ ಹಾಗೂ ಜಗದೀಶ ಸೇರಿಕೊಂಡು ಪ್ರತಿವಾದಿಗೆ ಮದ್ಯಪಾನ ಮಾಡಿಸಿ ಅವನಿಂದ ಈ ಆಸ್ತಿಯನ್ನು ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಪ್ರಮಾಣ ಪತ್ರದಲ್ಲಿ ಹೇಳಿದ ಎಲ್ಲ ಅಂಶ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.